ಪ್ರಥಮ ದರ್ಜೆಯ ನ್ಯಾಯಿಕ ದಂಡಾದಿಕಾರಿಗಳವರ ನ್ಯಾಯಾಲಯ
ಅಫಜಲಪೂರ

ಸಿಸಿ ನಂ.84/2015

ಚಾಸಾ-7 ಪ್ರಾಸಾ-8

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 10.10.2018

| | | |
|---|---|---|
| ಹೆಸರು | ಃ | ಡಾ. ಮಹ್ಮದ ಫಯಿಮದ್ದಿನ್ |
| ತಂದೆಯ ಹೆಸರು | ಃ | ಮೊಯಿನುದ್ದಿನ್ |
| ವಯಸ್ಸು | ಃ | 61-ವರ್ಷ |
| ಉದ್ಯೋಗ | ಃ | ನಿವೃತ್ತ ವೈದ್ಯಾಧಿಕಾರಿ |
| ವಾಸಸ್ಥಳ | ಃ | ಕಲಬುರಗಿ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

2004 ರಿಂದ 2017 ರವರೆಗೆ ಕಲಬುರಗಿಯ ಜಿಲ್ಲಾ ಆಸ್ಪತ್ರೆಯಲ್ಲಿ ಹಿರಿಯ ವೈದ್ಯಾಧಿಕಾರಿ ಎಂದು ಸೇವೆ ಸಲ್ಲಿಸಿದ್ದೇನೆ. ದಿನಾಂಕ 25.10.2014 ರಂದು ಚಾಸಾ-1 ರವರನ್ನು ಹಲ್ಲೆಯ ಇತಿಹಾಸದೊಂದಿಗೆ ಆಸ್ಪತ್ರೆಗೆ ಬಂದಿದ್ದನು. ಚಾಸಾ-1 ರವರನ್ನು ಮುಂಜಾನೆ 10.30 ಗಂಟೆಗೆ ಪರೀಕ್ಷಿಸಲಾಗಿ ಆತನ ಮುಖದ ಬಲಭಾಗದಲ್ಲಿ 2x2 0.5X0.5 ಅಳತೆಯ ಹರಿದ ಗಾಯ, ಎಡಭಾಗದ ಮೇಲತುಟಿಯಲ್ಲಿನ ಎರಡು ಹಲ್ಲು ಅಲುಗಾಡುತ್ತಿದ್ದವು, ಕೆಳತುಟಿಯಲ್ಲಿ ಹರದ ಗಾಯವಾಗಿತ್ತು. ಸದರಿ ಗಾಯಾಳುವಿಗೆ ಕ್ಷ-ಕಿರಣ ಹಾಗೂ ಸಿ.ಟಿ.ಸ್ಕ್ಯಾನ ಮಾಡಿಸಲು ತಿಳಿಸಿದ್ದು, ಆದರೆ ಆತನು ನಿರಾಕರಿಸಿರುತ್ತಾನೆ.

ಚಾಸಾ-1 ರವರಿಗಾದ ಅ.ನಂಃ 1, 3 ಮತ್ತು 4 ಸಾದಾ ಸ್ವರೂಪದ ಗಾಯಗಳಾಗಿದ್ದು, ಅ.ನಂಃ2 ರ ಕುರಿತು ಪರೀಕ್ಷಾ ವರದಿ ಗಾಯಾಳು ನೀಡದ ಕಾರಣ ಸದರಿ ಗಾಯದ ಕುರಿತು ಅಭಿಪ್ರಾಯ ಹೇಳಲು ಆಗುವುದಿಲ್ಲ. ಸದರಿ ಗಾಯಗಳು ಗಟ್ಟಿಯಾದ ಮತ್ತು ಮೊಂಡಾದ ವಸ್ತು ತಾಗಿದಾಗ ಆಗುವ ಸಂಭವ ಇರುತ್ತದೆ. ಸಾಕ್ಷಿ

ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಎಮ್.ಒ-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಅದರಂತೆ ಗಾಯಾಳು ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-8 ಎ ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಕೆ.ಜಿ.ಪಿ. ವಕೀಲರಿಂದ

ರೈತಾಪಿ ಕೆಲಸದಲ್ಲಿ ಎತ್ತುಗಳು ಒದ್ದಾಗ ಸಹ ಚಾಸಾ-1 ರವರಿಗೆ ಆದಂತಹ ಗಾಯವಾಗಬಹುದು. ಗಾಯದ ಪ್ರಾಯ ಹಾಗೂ ಬಣ್ಣ ನಮೂದಿಸಿಲ್ಲ. ಚಾಸಾ-1 ಹಲ್ಲೆಯ ಇತಿಹಾಸದೊಂದಿಗೆ ಆಸ್ಪತ್ರೆಗೆ ಬಂದಿದ್ದು, ನಿಪಿ-8 ರಲ್ಲಿ ತೋರಿಸಿದ ಗಾಯ ಕಂಡುಬಂದಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ